

# ಗುಜರಿ ಗಾಡಿ!



‘ಈ ಮನುಷ್ಯನಿಗೆ ಹೊಸ ದೃಷ್ಟಿ ಬಂತೆಂದರೆ ಸಾಕು– ಹೊಸದೊಂದು ಸೃಷ್ಟಿಸಿಯೇ ಬಿಡುತ್ತಾನೆ’ ಎನ್ನುವುದಕ್ಕೆ ಸಾಕ್ಷಿ ಬ್ಯಾಂಕಾಕ್‌ನ ರೂನ್‌ಗ್ರೂಜ್ನಾ ಸಾಂಗ್‌ವಾಂಕ್ ಪ್ರಿಸಾರ್ನ್.

ಕಾರು, ಬೈಕ್‌ಗಳ ಗುಜರಿಯಲ್ಲಿ ಕೆಲ ಸಾಮಾನುಗಳನ್ನು ಹೆಕ್ಕಿಕೊಂಡು ಮೋಟಾರ್ ಬೈಕ್‌ಗಳನ್ನು ಸಿದ್ದಗೊಳಿಸುವಲ್ಲಿ ಈತ ಎಕ್ಸ್‌ಪರ್ಟ್! ಡೈನೋಸಾರ್, ಗಾಡ್‌ಝಿಲ್ಲಾ ಮತ್ತಿತರ ಭಯಾನಕ ಪ್ರಾಣಿಗಳನ್ನೇ ಹೋಲುವಂತಹ ಬೈಕ್‌ಗಳನ್ನು ಸಿದ್ದಗೊಳಿಸಿ ಮಾರುಕಟ್ಟೆಗೆ ಪರಿಚಯಿಸುವುದು ಈತನ ಖಯಾಲಿ!

ಈತ ಸಿದ್ದಗೊಳಿಸುವ ಭಯಾನಕ ಬೈಕ್‌ಗಳಿಗೆ ಎಲ್ಲಿಲ್ಲದ ಡಿಮ್ಯಾಂಡಂತೆ. ಥಾಯ್ಲೆಂಡ್ ದೇಶವಲ್ಲದೆ ಇತರ ನಾಲ್ಕಾರು ರಾಷ್ಟ್ರಗಳಲ್ಲಿ ಬೈಕ್ ಸಿದ್ದಗೊಳಿಸುವ ‘ಕೊ ಆರ್ಟ್ ಶಾಪ್’ ಎನ್ನುವ ಶಾಖೆಗಳನ್ನು ಈತ ಹೊಂದಿದ್ದಾನೆ. ಪ್ರಿಸಾರ್ನ್ ಸಿದ್ದಗೊಳಿಸಿದ ಬೈಕ್‌ಗಳನ್ನು ಖರೀದಿಸಲು ಪ್ರಪಂಚದಾದ್ಯಂತ ಗ್ರಾಹಕರು ಬುಕಿಂಗ್ ಮಾಡಿ ಕಾಯುತ್ತಿದ್ದಾರೆ.

■ ವಸಂತ್ ಮೂಲವಿ